ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	837 (685)
ಸದಸ್ಯರ ಹೆಸರು	:	ಡಾ:. ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	:	15-12-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ನಗರಸಭೆಗಳಲ್ಲಿ ಪೌರಾಯುಕ್ತರ ಹುದ್ದೆಯಿಂದ ಹಿಡಿದು ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ ಹಾಗೂ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರುಗಳಿಂದ ಆರ್ಥಿಕ ನಷ್ಟ ಉಂಟಾದಾಗ ಅವರುಗಳ ಮೇಲೆ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 100(2)ರ ಪ್ರಕಾರ ಆ ಅಧಿಕಾರಿ/ನೌಕರರು ನಿಧನ ಹೊಂದಿದ ನಂತರವೂ ವಿಚಾರಣೆ ನಡೆಸಲು ಅವಕಾಶವಿದೆಯೇ;	ನಗರಸಭೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳಿಂದ ಆರ್ಥಿಕ ನಷ್ಟ ಉಂಟಾದಾಗ ಅವರುಗಳ ಮೇಲೆ ಇಲಾಖಾ ವಿಚಾರಣೆ ಮಾಡಲು ಅವಕಾಶ ಇರುತ್ತದೆ. ಒಂದು ವೇಳೆ ವಿಚಾರಣೆ ಸಮಯದಲ್ಲಿ ಸದರಿ ಅಧಿಕಾರಿ/ನೌಕರರು ನಿಧನ ಹೊಂದಿದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 100(2)ರ ಪ್ರಕಾರ "ಅಮಾನತ್ತಿನಲ್ಲಿರುವ ಸರ್ಕಾರಿ ನೌಕರನು ಅವನ ವಿರುದ್ಧ ಶಿಸ್ತಿನ ಅಥವಾ ನ್ಯಾಯಾಲಯದ ವಿಚಾರಣೆಗಳು ಪೂರ್ತಿಯಾಗುವುದಕ್ಕೆ ಮುಂಚೆ ಮೃತನಾದರೆ, ಅಮಾನತ್ತಿನ ಮತ್ತು ಮರಣದ ದಿನಾಂಕಗಳ ನಡುವಣ ಅವಧಿಯನ್ನು ಎಲ್ಲಾ ಉದ್ದೇಶಗಳಿಗಾಗಿ ಕರ್ತವ್ಯವೆಂಬಂತೆ ಪರಿಗಣಿಸತಕ್ಕದ್ದು, ಮತ್ತು ಆ ಅವಧಿಗಾಗಿ ಅಮಾನತ್ತುಗೊಳಿಸದೇ ಇದ್ದರೆ ಅವನು ಪಡೆಯಲು ಹಕ್ಕುವುಳ್ಳವನಾಗಿದ್ದು ಪೂರ್ಣ ವೇತನ ಮತ್ತು ಭತ್ಯೆಗಳನ್ನು ಈಗಾಗಲೇ ಸಂದಾಯ ಮಾಡಲಾಗಿರುವ ಜೀವನಾಧಾರ ಭತ್ಯಕ್ಕೆ ಸಂಬಂಧಿಸಿದ ಹೊಂದಾಣಿಕೆಗೆ ಒಳಪಟ್ಟು, ಅವನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು" ಎಂದು ಇರುತ್ತದೆ. ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ /10/ಸೇಇವಿ/2003 ಬೆಂಗಳೂರು, ದಿನಾಂಕ: 12.11.2003 ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರಡಿಯಲ್ಲಿ ಇಲಾಖಾ ವಿಚಾರಣೆ ನಡೆಯುತ್ತಿದ್ದಾಗ ಸರ್ಕಾರಿ ನೌಕರನು ಮೃತನಾದಾಗ ಇಲಾಖಾ ವಿಚಾರಣೆಯ ಮುಂದಿನ ಕ್ರಮದ ಕುರಿತು ಮಾರ್ಗಸೂಚಿ ನೀಡಲಾಗಿದೆ. ಮಾರ್ಗಸೂಚಿಯಂತೆ ವಿಚಾರಣೆ ಹಂತದಲ್ಲಿ ಅಧಿಕಾರಿ/ನೌಕರನು ಮೃತನಾದರೆ" The Employer Should have the liberty to assess such Financial Liability which is to be recoverable out of the amount due to the deceased employee on notice being given to the concerned heirs and i.e. the only by which proceedings can be concluded. If finding is recorded that there is any monetary liability as far as deceased employee is concerned, appropriate deductions can be made from the amounts payable to the respondents. ವಿಚಾರಣೆ ಹಂತದಲ್ಲಿ ಅಧಿಕಾರಿ/ನೌಕರ

		ಮೃತನಾದರೆ ಹಣಕಾಸಿನ ಹೊಣೆಗಾರಿಕೆ ಬಗ್ಗೆ ವಿಚಾರಣೆ ಮಾಡಿ ವಿಚಾರಣೆಯಲ್ಲಿ ಹೊಣೆಗಾರಿಕೆ ದೃಢಪಟ್ಟಲ್ಲಿ ಅಧಿಕಾರಿ/ನೌಕರನಿಗೆ ಬರುಬಹುದಾದ ಗ್ರಾಚ್ಯುಟಿ ಇತರೆ ಸೌಲಭ್ಯಗಳಿಂದ ವಸೂಲಿ ಮಾಡಬಹುದಾಗಿರುತ್ತದೆ. (ಸರ್ಕಾರದ ಸುತ್ತೋಲೆ **ಅನುಬಂಧ-01** ರಲ್ಲಿ ಲಗತ್ತಿಸಿದೆ)
ಆ.	ಇಲ್ಲದಿದ್ದಲ್ಲಿ, ಕೋಲಾರ ನಗರಸಭೆಗೆ ಸಂಬಂಧಿಸಿದಂತೆ ಪೌರಾಯುಕ್ತರು ಹಾಗೂ ಇತರೆ ಅಧಿಕಾರಿಗಳು ಆರ್ಥಿಕ ನಷ್ಟ ಉಂಟು ಮಾಡಿದ್ದಾರೆಂದು ತಿಳಿಸಿ, ಅವರುಗಳ ಮೇಲೆ ಇಲಾಖಾ ವಿಚಾರಣೆ ಕೈಗೊಂಡ ನಂತರ ಅವರಲ್ಲಿ ಯಾರಾದರೂ ನಿಧನ ಹೊಂದಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆಯೇ;	ಯಾವುದೇ ಪ್ರಕರಣ ಇರುವುದಿಲ್ಲ.
ಇ.	ಕೋಲಾರ ನಗರಸಭೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಗೆ ಒಳಪಟ್ಟ ಪೌರಾಯುಕ್ತರು/ಅಧಿಕಾರಿಗಳು ನಿಧನ ಹೊಂದಿದ ನಂತರ ಅವರ ಕುಟುಂಬಕ್ಕೆ ನಿಧನ ನಂತರದ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ಈ ರೀತಿಯಾಗಿ ಅಧಿಕಾರಿ/ನೌಕರರಿಗೆ ನಿಧನ ನಂತರದ ಸೌಲಭ್ಯಗಳನ್ನು ಅವರ ಕುಟುಂಬದವರಿಗೆ ಬಿಡುಗಡೆ ಮಾಡಲು ಇರುವ ಮಾನದಂಡಗಳೇನು; (ಆದೇಶದ ಪ್ರತಿಗಳನ್ನು ಒದಗಿಸುವುದು)	ಕೋಲಾರ ನಗರಸಭೆಗೆ ಸಂಬಂಧಿಸಿದಂತೆ, ಶ್ರೀ ಲಕ್ಷ್ಮೀನಾರಾಯಣ ರವರು ದಿನಾಂಕ: 27.09.2014 ರಿಂದ 08.06.2016 ರವರೆಗೆ ಕೋಲಾರ ನಗರಸಭೆಯಲ್ಲಿ ಪೌರಾಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದು ಈ ಅವಧಿಯಲ್ಲಿ ಇವರು ಎಸಗಿದ ಕಾರ್ಯ ವಿಧಾನ ಲೋಪ, ಟೆಂಡರ್ ಕರೆಯುವಲ್ಲಿ ಹಾಗೂ ಕೆ.ಟಿ.ಪಿ.ಪಿ ಪಾರದರ್ಶಕ ಕಾಯ್ದೆ ಉಲ್ಲಂಘನೆ ಮತ್ತು ಇತರೆ ವಿಷಯಗಳ ಬಗ್ಗೆ ಇವರ ವಿರುದ್ಧ 20 ದೋಷಾರೋಪಣೆಗಳನ್ನು ಜಾರಿಗೊಳಿಸಲಾಗಿದ್ದು, ಸದರಿ ದೋಷಾರೋಪಣೆಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 41443/2017ರಲ್ಲಿ ತಡೆಯಾಜ್ಞೆ ತಂದಿದ್ದರಿಂದ ಇಲಾಖಾ ವಿಚಾರಣೆಯು ಮುಂದುವರೆದಿರುವುದಿಲ್ಲ. ಏತನ್ಮಧ್ಯೆ, ವಿಚಾರಣಾಧಿಕಾರಿ, ಆರೋಪಕ್ಕೆ ಸೀಮಿತವಾಗಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರತ್ಯೇಕ ಆದೇಶಗಳನ್ನು ನೀಡುವಂತೆ ಕೋರಿರುವ ಹಿನ್ನಲೆಯಲ್ಲಿ ದಿನಾಂಕ: 17-11-2020ರಂದು 03 ಪ್ರತ್ಯೇಕವಾಗಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಶ್ರೀ ಕೆ.ಎನ್. ಲಕ್ಷ್ಮೀನಾರಾಯಣರವರು ಸರ್ಕಾರಿ ಸೇವೆಯಲ್ಲಿರುವಾಗಲೇ ಮರಣ ಹೊಂದಿದ್ದು ಅವರ ವಿರುದ್ಧದ ಆರೋಪ ಪಟ್ಟಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ಪ್ರಸ್ತಾಪಿಸಲಾಗಿದ್ದು, ನಿರ್ದೇಶನಾಲಯವನ್ನು ಅವರು ಕೋಲಾರ ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಅವಧಿಯಲ್ಲಿ ಎಷ್ಟು ಆರ್ಥಿಕ ನಷ್ಟಕ್ಕೆ ಹೊಣೆಗಾರರು ಎಂಬ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಪಡೆದು ನಿಯಮಾನುಸಾರ ಕ್ರಮವಹಿಸಲಾಗುವುದು.

		ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ನಿಗಮದ ಸೇವಾ ನಿಯಮದಂತೆ ನಿಧನ ನಂತರ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಧನರಾದ ಅಧಿಕಾರಿ/ನೌಕರರು ಘೋಷಿಸಿದ ವಾರಸುದಾರರಿಗೆ ನೀಡಲಾಗುವುದು.
ಈ	ಕೋಲಾರ ಸಭೆಯಲ್ಲಿ ಕಳೆದ 10 ವರ್ಷಗಳಿಂದ ಕೆ.ಎಸ್.ಎಸ್.ಐ.ಐ.ಡಿ.ಸಿ ವತಿಯಿಂದ ನಿಯೋಜನೆ ಮೇರೆಗೆ ಪೌರಾಯುಕ್ತರಾಗಿ/ನೌಕರರಾಗಿ ಕಾರ್ಯನಿರ್ವಹಿಸಿದವರ ವಿವರ ನೀಡುವುದು; ಹಾಗೂ ಮಾತೃ ಇಲಾಖೆಗೆ ಹಿಂದಿರುಗಿ ನಂತರ ಅವರು ನಿಧನ ಹೊಂದಿದ್ದಲ್ಲಿ, ಅವರ ಕುಟುಂಬದವರಿಗೆ ಆರ್ಥಿಕ ಸೌಲಭ್ಯ ಬಿಡುಗಡೆ ಮಾಡುವ ಸಲುವಾಗಿ ಕೋಲಾರ ನಗರಸಭೆಯಿಂದ ಅವರ ಮಾತೃ ಇಲಾಖೆಗೆ ಎನ್.ಒ.ಸಿ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳ ಸಮೇತ ಮಾಹಿತಿ ಒದಗಿಸುವುದು?	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ಒಬ್ಬ ಅಧಿಕಾರಿ ಶ್ರೀ ಕೆ.ಎನ್. ಲಕ್ಷ್ಮೀನಾರಾಯಣ, ವ್ಯವಸ್ಥಾಪಕರು, ಕೋಲಾರ ನಗರಸಭೆಯಲ್ಲಿ ನಿಯೋಜನೆಯ ಮೇರೆಗೆ ಪೌರಾಯುಕ್ತರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಪಾದಿತ ಅಧಿಕಾರಿಯ ಕುಟುಂಬದವರಿಗೆ ಆರ್ಥಿಕ ಸೌಲಭ್ಯ ಬಿಡುಗಡೆ ಮಾಡುವ ಸಲುವಾಗಿ ಕೋಲಾರ ನಗರಸಭೆಯಿಂದ ನಿಗಮಕ್ಕೆ ಇದುವರೆವಿಗೂ ಎನ್.ಒ.ಸಿ ನೀಡಿರುವುದಿಲ್ಲ. ಅಲ್ಲದೆ, ಅವರ ಕುಟುಂಬದ ಸದಸ್ಯರಲ್ಲಿ ಕೆಲವರು ಆರ್ಥಿಕ ಸೌಲಭ್ಯ ಬಿಡುಗಡೆ ಮಾಡುವ ಸಂಬಂಧ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಇತ್ತೀಚೆಗೆ ಅವರ ಮಗನೊಬ್ಬ ಸದರಿ ವಿಷಯದ ಬಗ್ಗೆ ಚಿಕ್ಕಬಳ್ಳಾಪುರ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಆದುದರಿಂದ ಮೇಲಿನ ಕಾರಣದಿಂದಾಗಿ ಶ್ರೀಯುತರಿಗೆ ನಿಧನದ ನಂತರ ಆರ್ಥಿಕ ಸೌಲಭ್ಯ ಬಿಡುಗಡೆ ಮಾಡಿರುವುದಿಲ್ಲ.

ಸಂಖ್ಯೆ: ನಅಇ 01 ಎಲ್‌ಸಿಕ್ಯೂ 2020

(ಎನ್.ನಾಗರಾಜು ಎಂ.ಟಿ.ಬಿ.)
ಪೌರಾಡಳಿತ ಮತ್ತು ಸಕ್ಕರೆ ಸಚಿವರು